# ಪೀಠಿಕೆ

**ಪೀಠಿಕೆ**

# 1. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

## ಸಾಮಾನ್ಯ

**1.** ಕರ್ನಾಟಕದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಸಾವಉಗಳು) ರಾಜ್ಯ ಸರ್ಕಾರಿ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳನ್ನು ಒಳಗೊಂಡಿವೆ. ರಾಜ್ಯ ಸಾವಉಗಳನ್ನು ಸಾರ್ವಜನಿಕರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಾಣಿಜ್ಯಿಕ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಸ್ಥಾಪಿಸಲಾಯಿತು ಹಾಗೂ ಅವು ರಾಜ್ಯದ ಆರ್ಥಿಕತೆಯಲ್ಲಿ ಒಂದು ವಿಶೇಷ ಸ್ಥಾನಮಾನ ಕೂಡ ಹೊಂದಿದೆ. 31 ಮಾರ್ಚ್ 2019ರಲ್ಲಿದ್ದಂತೆ, ಕರ್ನಾಟಕದಲ್ಲಿ ಆರು ಶಾಸನಬದ್ಧ ನಿಗಮಗಳು ಮತ್ತು 13 ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನು ಒಳಗೊಂಡಂತೆ 114 ಸಾವಉಗಳು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಯಲ್ಲಿರುತ್ತವೆ. ಇವುಗಳ ಪೈಕಿ, ಒಂದು ಸಾವಉವನ್ನು[1] ಷೇರು ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಲಾಗಿತ್ತು. ಸ್ಥಾಪಿಸಲಾದ/ವಹಿಸಲಾದ ಏಳು ಸಾವಉಗಳನ್ನು[2] 2018–19ನೇ ಸಾಲಿನಲ್ಲಿ ಸೇರಿಸಲಾಗಿದೆ.

**2.** 30 ಸೆಪ್ಟೆಂಬರ್ 2019ರಂತೆ, ಇತ್ತೀಚೆಗೆ ಮುಕ್ತಾಯಗೊಂಡ ಲೆಕ್ಕಪತ್ರಗಳ ಆಧಾರದ ಮೇಲೆ ಸಾವಉಗಳ ಹಣಕಾಸಿನ ಸಾಧನೆಯನ್ನು ಈ ವರದಿ ವ್ಯಾಪಿಸಿದೆ. ಸಾವಉಗಳ ಸ್ವರೂಪ ಮತ್ತು ಲೆಕ್ಕಪತ್ರಗಳ ಸ್ಥಿತಿಯನ್ನು ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1: ವರದಿಯಲ್ಲಿ ವ್ಯಾಪಿಸಿರುವ ಸಾವಉಗಳ ಸ್ವರೂಪ.**

| ಕ್ರಮ ಸಂಖ್ಯೆ | ಸಾವಉಗಳ ಮಾದರಿ | ಒಟ್ಟು ಸಂಖ್ಯೆ | ವರದಿಯ ಅವಧಿಯಲ್ಲಿ ಲೆಕ್ಕಪತ್ರಗಳನ್ನು ಸಲ್ಲಿಸಿದ್ದ ಸಾವಉಗಳ ಸಂಖ್ಯೆ[3] | | | 30 ಸೆಪ್ಟೆಂಬರ್ 2019ರಂತೆ ಲೆಕ್ಕಪತ್ರಗಳು ಬಾಕಿಯಿದ್ದ ಸಾವಉಗಳ ಸಂಖ್ಯೆ (ಒಟ್ಟು ಬಾಕಿಯಿರುವ ಲೆಕ್ಕಪತ್ರಗಳು) |
|---|---|---|---|---|---|---|
| | | | 2018–19 | 2017–18 | ಒಟ್ಟು | |
| 1 | ಕಾರ್ಯನಿರತ ಸಾವಉಗಳು | 95 | 49 | 31 | 80 | 46 (73)[4] |
| 2 | ಶಾಸನಬದ್ಧ ನಿಗಮಗಳು | 6 | 0 | 5 | 5 | 06 (07) |
| | **ಕಾರ್ಯನಿರತ ಒಟ್ಟು ಸಾವಉಗಳು** | **101** | **49** | **36** | **85** | **52 (80)** |
| 3 | ಕಾರ್ಯಸ್ಥಗಿತ ಸಾವಉಗಳು | 13 | 6 | 1 | 7 | 07 (82)[5] |
| | **ಒಟ್ಟು** | **114** | **55** | **37** | **92** | **59 (162)** |

ಲೆಕ್ಕಪತ್ರಗಳು ಬಾಕಿ ಇದ್ದಂತಹ ಕಾರ್ಯನಿರತ ಸಾವಉಗಳು ಮೂರರಿಂದ ಆರು ವರ್ಷಗಳ ಬಾಕಿ ಹೊಂದಿದ್ದ ಎಂಟು ಸಾವಉಗಳನ್ನು (ಡಿಡಿಯುಟಿಟಿಎಲ್, ಕೆಎಸ್‌ಎಸ್‌ಕೆಡಿಸಿಎಲ್, ಕೆಎಮ್‌ಡಿಸಿ,

---

[1] ಮೈಸೂರು ಕಾಗದ ಕಾರ್ಖಾನೆ ನಿಯಮಿತ.

[2] ಸೈನ್ಸ್ ಗ್ಯಾಲರಿ ಬೆಂಗಳೂರು, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ–ಅಕ್ಟೋಬರ್ 2017ರಲ್ಲಿ ಸ್ಥಾಪಿತವಾಯಿತು ಆದರೆ 2017–18ರ ಲೆಕ್ಕಪರಿಶೋಧನಾ ವರದಿಯಲ್ಲಿ ಪರಿಗಣಿಸಿರಲಿಲ್ಲ; ಬೆಂಗಳೂರು ಸ್ಮಾರ್ಟ್ ಸಿಟಿ ನಿಯಮಿತ– ಜನವರಿ 2018ರಲ್ಲಿ ಸ್ಥಾಪಿತವಾಯಿತು ಆದರೆ 2017–18ರ ಲೆಕ್ಕಪರಿಶೋಧನಾ ವರದಿಯಲ್ಲಿ ಪರಿಗಣಿಸಿರಲಿಲ್ಲ; ರೈಲ್ ಇನ್ಫ್ರಾಸ್ಟ್ರಕ್ಚರ್ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ–ಜನವರಿ 2019ರಲ್ಲಿ ಲೆಕ್ಕಪರಿಶೋಧನೆಯನ್ನು ವಹಿಸಲಾಯಿತು; ಮತ್ತು ಡಿ.ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ನಿಯಮಿತ–ಡಿಸೆಂಬರ್ 2018ರಲ್ಲಿ ಲೆಕ್ಕಪರಿಶೋಧನೆಯನ್ನು ವಹಿಸಲಾಯಿತು.

[3] ಅಕ್ಟೋಬರ್ 2018ರಿಂದ ಸೆಪ್ಟೆಂಬರ್ 2019.

[4] 2018–19ರಲ್ಲಿ ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿದ್ದ 31 ಸಾವಉಗಳನ್ನು ಮತ್ತು 42 ಲೆಕ್ಕಪತ್ರಗಳನ್ನು (2018–19ಕ್ಕೆ ಮುಂಚಿನ ಅವಧಿಗೆ ಸಂಬಂಧಿಸಿದ್ದು) ಬಾಕಿ ಹೊಂದಿದ್ದ 15 ಸಾವಉಗಳನ್ನು ಒಳಗೊಂಡಿದೆ.

[5] ಸಮಾಪನ ಪ್ರಕ್ರಿಯೆಯಲ್ಲಿದ್ದ ನಾಲ್ಕು ಸಾವಉಗಳ 60 ಲೆಕ್ಕಪತ್ರಗಳನ್ನು ಒಳಗೊಂಡಿದೆ (ಕೆಎಸ್‌ವಿಎಲ್, ಎಮ್‌ಸಿಎಲ್, ಕೆಟಿಎಲ್ ಮತ್ತು ಎಮ್‌ಎಸಿಎಲ್).

ಕೆಎಸ್ಎಡಬ್ಲ್ಯೂಡಿಸಿಎಲ್, ಎಮ್‌ಪಿಎಮ್, ಕೆಎಸ್‌ಸಿಸಿಎಲ್, ಕೆವಿಟಿಎಸ್‌ಡಿಸಿಎಲ್ ಮತ್ತು ಮೈಶುಗರ್) ಒಳಗೊಂಡಿತ್ತು. ಮುಂದುವರೆದು, ನಾಲ್ಕು ಕಾರ್ಯಸ್ಥಗಿತ ಸಾವಉಗಳು (ಕೆಎಸ್‌ವಿಎಲ್, ಎಮ್‌ಸಿಎಲ್, ಕೆಟಿಎಲ್ ಮತ್ತು ಎಮ್‌ಎಸಿಸಿಎಲ್) 14ರಿಂದ 16 ವರ್ಷಗಳ ಬಾಕಿ ಹೊಂದಿದ್ದವು.

ಸೆಪ್ಟೆಂಬರ್ 2019ರಲ್ಲಿದ್ದಂತೆ ಕಾರ್ಯನಿರತ ಸಾವಉಗಳು, ತಮ್ಮ ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ₹ 70,599.16 ಕೋಟಿ ಮೊತ್ತದಷ್ಟು ವಹಿವಾಟನ್ನು ದಾಖಲಿಸಿದ್ದವು. ಈ ವಹಿವಾಟು 2018–19ರ ಸಾಲಿಗೆ ರಾಜ್ಯದ ಒಟ್ಟು ದೇಶೀಯ ಉತ್ಪನ್ನದ (ಜಿಡಿಪಿ) ಶೇಕಡಾ 5.01ಕ್ಕೆ ಸಮನಾಗಿತ್ತು. ಕಾರ್ಯನಿರತ ಸಾವಉಗಳು, ಸೆಪ್ಟಂಬರ್ 2019ರಲ್ಲಿದ್ದಂತೆ, ಅವುಗಳ ಇತ್ತೀಚೆಗೆ ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರಕಾರ ಒಟ್ಟಾರೆ ₹ 2,340.99 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ನಷ್ಟವನ್ನು ಅನುಭವಿಸಿದ್ದವು. ಮಾರ್ಚ್ 2019ರ ಅಂತ್ಯದಲ್ಲಿದ್ದಂತೆ ಸಾವಉಗಳು 2.02 ಲಕ್ಷ ಉದ್ಯೋಗಿಗಳನ್ನು ಹೊಂದಿದ್ದವು.

31 ಮಾರ್ಚ್ 2019ರಲ್ಲಿದ್ದಂತೆ, ₹ 544.72 ಕೋಟಿ ಮೊತ್ತದಷ್ಟು ಹೂಡಿಕೆಗಳನ್ನು ಹೊಂದಿದ್ದಂತಹ 13 ಸಾವಉಗಳು ಕಳೆದ 16 ವರ್ಷಗಳಿಂದಲೂ ಕಾರ್ಯಸ್ಥಗಿತಗೊಂಡಿದ್ದವು. ಕಾರ್ಯಸ್ಥಗಿತ ಸಾವಉಗಳಲ್ಲಿ ಮಾಡಲಾಗಿರುವ ಹೂಡಿಕೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಯಾವುದೇ ಕಾಣಿಕೆಯನ್ನೂ ನೀಡುವುದಿಲ್ಲವಾದ್ದರಿಂದ ಇದು ಒಂದು ನಿರ್ಣಾಯಕ ಕ್ಷೇತ್ರವಾಗಿದೆ.

**ಉತ್ತರದಾಯಿತ್ವದ ಚೌಕಟ್ಟು**

**3**. ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳು ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 619 ಮತ್ತು ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 139 ಹಾಗೂ 143ರ ಅನುಕ್ರಮ ಅನುವುಗಳಿಂದ ನಿರ್ವಹಿಸಲ್ಪಡುತ್ತವೆ. ಅಧಿನಿಯಮದ ಪರಿಚ್ಛೇದ 2(45)ರ ಪ್ರಕಾರ, ಸರ್ಕಾರಿ ಕಂಪನಿ ಎಂದರೆ ಷೇರು ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇಲ್ಲದಂತೆ ಪಾವತಿಸಲ್ಪಟ್ಟಿರುವ ಷೇರು ಬಂಡವಾಳವನ್ನು ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶಃವಾಗಿ ಕೇಂದ್ರ ಸರ್ಕಾರ ಮತ್ತು ಭಾಗಶಃವಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯ ಸರ್ಕಾರಗಳು ಹೊಂದಿರುವ ಯಾವುದೇ ಕಂಪನಿಯಾಗಿರಬಹುದು ಹಾಗೂ ಅಂತಹ ಸರ್ಕಾರಿ ಕಂಪನಿಯ ಒಂದು ಅಧೀನ ಸಂಸ್ಥೆಯಾಗಿರುವ ಕಂಪನಿಯನ್ನೂ ಅದು ಒಳಗೊಂಡಿರುತ್ತದೆ.

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 139(5) ಮತ್ತು (7)ರ ಅಡಿಯಲ್ಲಿ ಸರ್ಕಾರಿ ಕಂಪನಿ ಮತ್ತು ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಇತರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ನೇಮಕಗೊಳಿಸುತ್ತಾರೆ. ಸರ್ಕಾರಿ ಕಂಪನಿ ಅಥವಾ ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಇತರ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಸಿಎಜಿ ಹಣಕಾಸು ವರ್ಷ ಪ್ರಾರಂಭವಾದ 180 ದಿನಗಳ ಒಳಗೆ ನೇಮಿಸಬೇಕು ಎಂಬುದನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139(5) ಒದಗಿಸಿದೆ. ಸರ್ಕಾರಿ ಕಂಪನಿ ಅಥವಾ ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ಇತರ ಕಂಪನಿಯ ಮೊಟ್ಟಮೊದಲ ಲೆಕ್ಕಪರಿಶೋಧಕರನ್ನು ಕಂಪನಿಯು ನೋಂದಾಯಿಸಲ್ಪಟ್ಟ ದಿನದಿಂದ 60 ದಿನಗಳ ಒಳಗಾಗಿ ಸಿಎಜಿ ನೇಮಿಸಬೇಕೆಂಬುದಾಗಿ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 139(7) ಒದಗಿಸಿದೆಯಲ್ಲದೆ ಈ ಅವಧಿಯಲ್ಲಿ ಸಿಎಜಿ ಲೆಕ್ಕಪರಿಶೋಧಕರನ್ನು ನೇಮಿಸದೇ ಇದ್ದಲ್ಲಿ ಕಂಪನಿಯ ನಿರ್ದೇಶಕರ ಮಂಡಳಿ ಅಥವಾ ಕಂಪನಿಯ ಸದಸ್ಯರು ಲೆಕ್ಕಪರಿಶೋಧಕರನ್ನು ನೇಮಿಸಬೇಕು.

ಮುಂದುವರೆದು, ಅಧಿನಿಯಮದ ಪರಿಚ್ಛೇದ 143ರ ಉಪ–ಪರಿಚ್ಛೇದ 7ರ ಪ್ರಕಾರ, ಕಂಪನಿಯು ಪರಿಚ್ಛೇದ 139ರ ಉಪ–ಪರಿಚ್ಛೇದ (5) ಅಥವಾ ಉಪ–ಪರಿಚ್ಛೇದ (7)ರ ಅಡಿಯಲ್ಲಿ ವ್ಯಾಪಿಸಿದ್ದಲ್ಲಿ, ಅಗತ್ಯವೆಂಬುದಾಗಿ ಪರಿಗಣಿಸಿದಲ್ಲಿ, ಸಿಎಜಿ ಒಂದು ಆದೇಶದ ಮೂಲಕ, ಅಂತಹ ಕಂಪನಿಯ ಲೆಕ್ಕಪತ್ರಗಳ ಪರೀಕ್ಷಾ–ಪರಿಶೀಲನೆಯನ್ನು ಮಾಡಿಸಬಹುದು. ಸಿಎಜಿಯವರ (ಕರ್ತವ್ಯಗಳು, ಅಧಿಕಾರಗಳು ಹಾಗೂ ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿನ ಅನುವುಗಳು ಅಂತಹ ಪರೀಕ್ಷಾ–ಪರಿಶೀಲನೆಗೆ ಅನ್ವಯಿಸುತ್ತವೆ. ಈ ರೀತಿಯಾಗಿ, ಒಂದು ಸರ್ಕಾರಿ

ಕಂಪನಿ ಅಥವಾ ಕೇಂದ್ರ ಸರ್ಕಾರ, ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶಃವಾಗಿ ಒಂದು ಅಥವಾ ಭಾಗಶಃ ಕೇಂದ್ರ ಸರ್ಕಾರ ಮತ್ತು ಭಾಗಶಃ ಒಂದಕ್ಕಿಂತ ಹೆಚ್ಚಿನ ಯಾವುದೇ ರಾಜ್ಯ ಸರ್ಕಾರಗಳಿಂದ ನೇರವಾಗಿ ಅಥವಾ ಪರೋಕ್ಷವಾಗಿ ಅದರ ಒಡೆತನವನ್ನು ಹೊಂದಿದ ಅಥವಾ ನಿಯಂತ್ರಣವನ್ನು ಹೊಂದಿದ ಯಾವುದೇ ಇತರ ಕಂಪನಿಯು ಸಿಎಜಿಯವರ ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಬರುತ್ತದೆ. 31 ಮಾರ್ಚ್ 2014ರಂದು ಅಥವಾ ಅದಕ್ಕೂ ಮುಂಚಿತವಾಗಿ ಪ್ರಾರಂಭಗೊಳ್ಳುವ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಒಂದು ಕಂಪನಿಯ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯು ಕಂಪನಿಗಳ ಅಧಿನಿಯಮ, 1956ರ ಅನುವುಗಳಿಂದ ನಿಯಂತ್ರಿಸಲ್ಪಡುವುದು ಮುಂದುವರೆಯುತ್ತದೆ.

***ಶಾಸನಬದ್ಧ ಲೆಕ್ಕಪರಿಶೋಧನೆ***

**4.** ಸರ್ಕಾರಿ ಕಂಪನಿಗಳ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯನ್ನು ಅಧಿನಿಯಮದ ಪರಿಚ್ಛೇದ 139(5) ಅಥವಾ 139(7)ರ ಅನುವುಗಳ ಪ್ರಕಾರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡುತ್ತಾರೆ. ತದನಂತರ, ಲೆಕ್ಕಪರಿಶೋಧನಾ ವರದಿಯ ಪ್ರತಿಯನ್ನು ಅಧಿನಿಯಮದ ಪರಿಚ್ಛೇದ 143(5)ರ ಅಡಿಯಲ್ಲಿ ಸಿಎಜಿಯವರಿಗೆ ಸಲ್ಲಿಸಲಾಗುವುದು, ಆ ವರದಿಯು ಇನ್ನಿತರವುಗಳ ಜೊತೆಗೆ ಕಂಪನಿಯ ಹಣಕಾಸು ತಃಖ್ತೆಗಳನ್ನು ಒಳಗೊಂಡಿರುತ್ತವೆ. ಈ ಹಣಕಾಸು ತಃಖ್ತೆಗಳು ಅಧಿನಿಯಮದ ಪರಿಚ್ಛೇದ 143 (6)ರ ಅನುವುಗಳ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯು ಸ್ವೀಕೃತಗೊಂಡ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಸಿಎಜಿಯವರ ಪೂರಕ–ಲೆಕ್ಕಪರಿಶೋಧನೆಗೆ ಒಳಪಡುತ್ತವೆ.

ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಸಂಬಂಧಿತ ಶಾಸನಗಳಿಂದ ನಿಯಂತ್ರಿಸಲ್ಪಡುತ್ತದೆ. ಕರ್ನಾಟಕದಲ್ಲಿನ ಆರು ಶಾಸನಬದ್ಧ ನಿಗಮಗಳ ಪೈಕಿ, ನಾಲ್ಕು ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ[6] ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುತ್ತಾರೆ. ರಾಜ್ಯ ಉಗ್ರಾಣ ನಿಗಮ ಹಾಗೂ ರಾಜ್ಯ ಹಣಕಾಸು ನಿಗಮಗಳಿಗೆ ಸಂಬಂಧಿಸಿದಂತೆ, ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು ನಡೆಸುತ್ತಾರಾದಲ್ಲಿ ಪೂರಕ ಲೆಕ್ಕಪರಿಶೋಧನೆಯನ್ನು ಸಿಎಜಿಯವರು ನಡೆಸುತ್ತಾರೆ.

## ಶಾಸನಗಳ ಹಣಕಾಸು ತಃಖ್ತೆಗಳ ಸಲ್ಲಿಕೆ

***ಸಮಯೋಚಿತ ಮುಕ್ತಾಯಗೊಳಿಸುವಿಕೆ ಮತ್ತು ಸಲ್ಲಿಕೆಯ ಅವಶ್ಯಕತೆ***

**5.** ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 394 ಮತ್ತು 395ರ ಅನುಸಾರ ಸರ್ಕಾರಿ ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ ಮೂರು ತಿಂಗಳ ಒಳಗಾಗಿ ಅದರ ಕಾರ್ಯಾಚರಣೆ ಮತ್ತು ವ್ಯವಹಾರಗಳ ಬಗ್ಗೆ ಒಂದು ವಾರ್ಷಿಕ ವರದಿಯನ್ನು ತಯಾರಿಸಬೇಕು ಮತ್ತು ಆ ವರದಿ ತಯಾರಾದ ನಂತರ ಶೀಘ್ರದಲ್ಲಿ ಆ ವರದಿಯ ಜೊತೆ ಲೆಕ್ಕಪರಿಶೋಧನಾ ವರದಿಯ ಒಂದು ಪ್ರತಿ ಮತ್ತು ಲೆಕ್ಕಪರಿಶೋಧನಾ ವರದಿಯ ಮೇಲೆ ಅಥವಾ ಪೂರಕವಾದ ಸಿಎಜಿಯವರ ಟಿಪ್ಪಣಿಗಳನ್ನು ರಾಜ್ಯದ ಶಾಸಕಾಂಗದ ಎರಡೂ ಮನೆಗಳಲ್ಲಿ ಮಂಡಿಸಬೇಕು. ಶಾಸನಬದ್ಧ ನಿಗಮಗಳಿಗೆ ಅವುಗಳನ್ನು ನಿಯಂತ್ರಿಸುವ ಶಾಸನಗಳಲ್ಲಿ ಇಂತಹವೇ ಅನವುಗಳು ಇವೆ. ರಾಜ್ಯದ ಏಕೀಕೃತ ನಿಧಿಯಿಂದ ಮಾಡಲಾದ ಸಾರ್ವಜನಿಕ ಹಣಕಾಸಿನ ಹೂಡಿಕೆಯ ಬಳಕೆಯ ಮೇಲೆ ಅವಶ್ಯವಾದ ಶಾಸನಾತ್ಮಕ ನಿಯಂತ್ರಣವನ್ನು ಈ ಕಾರ್ಯವಿಧಾನವು ಒದಗಿಸುತ್ತದೆ.

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 96ರಂತೆ ಪ್ರತಿಯೊಂದು ಕಂಪನಿಯು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ಷೇರುದಾರರ ವಾರ್ಷಿಕ ಸಾಮಾನ್ಯ ಸಭೆ ನಡೆಸಬೇಕು. ಒಂದು ವಾರ್ಷಿಕ ಸಾಮಾನ್ಯ ಸಭೆಯಿಂದ ಇನ್ನೊಂದು ವಾರ್ಷಿಕ ಸಾಮಾನ್ಯ ಸಭೆಗೂ ನಡುವೆ 15 ತಿಂಗಳು

[6] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ.

ಮೀರಬಾರದು ಎಂಬುದನ್ನೂ ಹೇಳಲಾಗಿದೆ. ಹಣಕಾಸಿನ ವರ್ಷದ ಹಣಕಾಸಿನ ಪಟ್ಟಿಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರ ಪರಿಗಣನೆಗಾಗಿ ಮಂಡಿಸಬೇಕು ಎಂದು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 129 ನಿರ್ಧಿಷ್ಟಪಡಿಸಿದೆ. ಕಂಪನಿಗಳ ಆಧಿನಿಯಮ 2013ರ ಪರಿಚ್ಛೇದ 129ರ ಅನುವುಗಳನ್ನು ಪಾಲನೆ ಮಾಡದೇ ಇದ್ದಲ್ಲಿ ಕಂಪನಿಯ ನಿರ್ದೇಶಕರನ್ನು ಒಳಗೊಂಡಂತೆ ಅದಕ್ಕೆ ಕಾರಣಕರ್ತರಾದ ವ್ಯಕ್ತಿಗಳಿಗೆ ದಂಡ ವಿಧಿಸಿ ಮತ್ತು ಜೈಲು ಶಿಕ್ಷೆಗೆ ಗುರಿಯಾಗಿಸಬಹುದೆಂದು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 129(7) ಒದಗಿಸಿದೆ.

***ಸರ್ಕಾರ ಹಾಗೂ ಶಾಸಕಾಂಗದ ಪಾತ್ರ***

**6**. ರಾಜ್ಯ ಸರ್ಕಾರವು ತನ್ನ ಆಡಳಿತಾತ್ಮಕ ಇಲಾಖೆಗಳ ಮೂಲಕ ಈ ಸಾವಲುಗಳ ಮೇಲೆ ನಿಯಂತ್ರಣಗಳನ್ನು ಚಲಾಯಿಸುತ್ತದೆ. ಮಂಡಳಿಗೆ ಮುಖ್ಯ ಕಾರ್ಯನಿರ್ವಾಹಕರು ಹಾಗೂ ನಿರ್ದೇಶಕರುಗಳನ್ನು ಸರ್ಕಾರವು ನೇಮಕ ಮಾಡುತ್ತದೆ.

ರಾಜ್ಯ ಶಾಸಕಾಂಗವು ಈ ಸಾವಲುಗಳಲ್ಲಿ ಸರ್ಕಾರದ ಹೂಡಿಕೆಗಳನ್ನು ಲೆಕ್ಕವನ್ನಿಡುವಿಕೆ ಹಾಗೂ ಬಳಸುವಿಕೆಯನ್ನು ಕೂಡ ಮೇಲ್ವಿಚಾರಣೆ ಮಾಡುತ್ತದೆ. ಇದಕ್ಕಾಗಿ, ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಜೊತೆಯಲ್ಲಿ ವಾರ್ಷಿಕ ವರದಿಗಳು ಹಾಗೂ ಸಿಎಜಿಯವರ ಟೀಕೆಟಿಪ್ಪಣಿಗಳು ಹಾಗೂ ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಅಧಿನಿಯಮದ ಪರಿಚ್ಛೇದ 394(2) ಮತ್ತು/ಅಥವಾ 395ರ ಅಡಿಯಲ್ಲಿ ಅಥವಾ ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ಶಾಸಕಾಂಗದ ಮುಂದೆ ಮಂಡಿಸಲಾಗುವುದು. ಸಿಎಜಿಯವರ ಲೆಕ್ಕಪರಿಶೋಧನಾ ವರದಿಗಳನ್ನು ಸಿಎಜಿಯವರ (ಕರ್ತವ್ಯಗಳು, ಅಧಿಕಾರಗಳು ಹಾಗೂ ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

**ರಾಜ್ಯ ಸಾವಲುಗಳಲ್ಲಿ ಹೂಡಿಕೆಗಳು**

**7.** ರಾಜ್ಯ ಸರ್ಕಾರವು ಈ ಸಾವಲುಗಳಲ್ಲಿ ಹಣಕಾಸಿನ ಪಾಲನ್ನು ಹೊಂದಿದೆ. ಈ ಪಾಲು ಪ್ರಮುಖವಾಗಿ ಮೂರು ರೀತಿಗಳಲ್ಲಿದೆ:

- **ಷೇರು ಬಂಡವಾಳ ಮತ್ತು ಸಾಲಗಳು** – ಕರ್ನಾಟಕ ಸರ್ಕಾರವು ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಕಾಲಾನುಕಾಲಕ್ಕೆ ಷೇರು ಬಂಡವಾಳವನ್ನು ಮತ್ತು ಸಾಲಗಳ ರೂಪದಲ್ಲಿ ಹಣಕಾಸಿನ ನೆರವನ್ನು ಒದಗಿಸುತ್ತದೆ.

- **ವಿಶೇಷ ಹಣಕಾಸಿನ ಬೆಂಬಲ** – ಕರ್ನಾಟಕ ಸರ್ಕಾರವು ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಅಗತ್ಯತೆ ಉಂಟಾದಾಗಲೆಲ್ಲಾ ಅನುದಾನಗಳು ಹಾಗೂ ಸಹಾಯಧನಗಳ ರೂಪದಲ್ಲಿ ಆಯವ್ಯಯ ಬೆಂಬಲವನ್ನು ಒದಗಿಸುತ್ತದೆ; ಮತ್ತು

- **ಖಾತರಿಗಳು** – ಕರ್ನಾಟಕ ಸರ್ಕಾರವು, ಹಣಕಾಸು ಸಂಸ್ಥೆಗಳಿಂದ ಸಾರ್ವಜನಿಕ ವಲಯದ ಉದ್ದಿಮೆಗಳು ಬಳಸಿಕೊಂಡ ಸಾಲಗಳನ್ನು (ಬಡ್ಡಿಯ ಜೊತೆಯಲ್ಲಿ) ಮರುಪಾವತಿಸುವುದಕ್ಕೆ ಖಾತರಿಗಳನ್ನು ನೀಡುತ್ತದೆ.

**8**. 31 ಮಾರ್ಚ್ 2019ರಲ್ಲಿದ್ದಂತೆ, 114 ಸಾವಲುಗಳಲ್ಲಿ ಮಾಡಲಾಗಿದ್ದಂತಹ ಹೂಡಿಕೆಗಳು (ಬಂಡವಾಳ ಹಾಗೂ ದೀರ್ಘಾವಧಿ ಸಾಲಗಳು) ಈ ಕೆಳಗೆ ನೀಡಲಾಗಿರುವ ವಿವರಣೆಗಳಂತೆ ₹ 1,32,841.77 ಕೋಟಿ[7] ಆಗಿತ್ತು.

[7] ಇಪ್ಪತ್ತೈದು ಸಾವಲುಗಳು (ಕಾರ್ಯಸ್ಥಗಿತ ಸಾವಲುಗಳನ್ನು ಒಳಗೊಂಡಂತೆ) ಮಾರ್ಚ್ 2019ರ ಅಂತ್ಯಕ್ಕೆ ಮಾಡಿದ ಹೂಡಿಕೆಗಳ ಬಗೆಗಿನ ಮಾಹಿತಿಯನ್ನು ಒದಗಿಸಿಲ್ಲ. ಹಿಂದಿನ ವರ್ಷಗಳಲ್ಲಿ ನೀಡಿದ ಮಾಹಿತಿಯನ್ನು ಪರಿಗಣಿಸಲಾಗಿದೆ.

**ಕೋಷ್ಟಕ ಸಂಖ್ಯೆ: 2 ಸಾವಲಉಗಳಲ್ಲಿನ ಒಟ್ಟಾರೆ ಹೂಡಿಕೆಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಸಾವಲಉಗಳ ಮಾದರಿ | ಸರ್ಕಾರಿ ಕಂಪನಿಗಳು | | | ಶಾಸನಬದ್ಧ ನಿಗಮಗಳು | | | ಒಟ್ಟು ಮೊತ್ತ |
|---|---|---|---|---|---|---|---|---|
| | | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | |
| 1 | ಕಾರ್ಯನಿರತ ಸಾವಲಉಗಳು | 71,770.40 | 55,579.18 | 1,27,349.58 | 1,613.23 | 3,334.25 | 4,947.48 | 1,32,297.06 |
| 2 | ಕಾರ್ಯಸ್ಥಗಿತ ಸಾವಲಉಗಳು | 111.85 | 432.86 | 544.71 | - | - | - | 544.71 |
| | **ಒಟ್ಟು** | **71,882.25** | **56,012.04** | **1,27,894.29** | **1,613.23** | **3,334.25** | **4,947.48** | **1,32,841.77** |

31 ಮಾರ್ಚ್ 2019ರಲ್ಲಿದ್ದಂತೆ, ರಾಜ್ಯ ಸಾವಲಉಗಳಲ್ಲಿನ ಒಟ್ಟಾರೆ ಹೂಡಿಕೆಗಳ ಪೈಕಿ, ಶೇಕಡಾ 99.59ರಷ್ಟು ಕಾರ್ಯನಿರತ ಸಾವಲಉಗಳಲ್ಲಿ ಹಾಗೂ ಉಳಿದ ಶೇಕಡಾ 0.41ರಷ್ಟು ಹೂಡಿಕೆಗಳು ಕಾರ್ಯಸ್ಥಗಿತ ಸಾವಲಉಗಳಲ್ಲಿ ಇದ್ದವು. ಒಟ್ಟಾರೆ ಹೂಡಿಕೆಯು ಬಂಡವಾಳದ ಕಡೆಗೆ ಶೇಕಡಾ 55.33ರಷ್ಟು ಹಾಗೂ ಶೇಕಡಾ 44.67ರಷ್ಟು ದೀರ್ಘಾವಧಿ ಸಾಲಗಳಲ್ಲಿ ಆಗಿತ್ತು. ಹೂಡಿಕೆಯು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ 2014–15ರಲ್ಲಿದ್ದಂತಹ ₹ 83,282.11 ಕೋಟಿ ಮೊತ್ತದಿಂದ 2018–19ರಲ್ಲಿ ₹ 1,32,841.77 ಕೋಟಿಗೆ, ಅಂದರೆ ಶೇಕಡಾ 59.51ರಷ್ಟು ಏರಿಕೆಯಾಗಿತ್ತು.

**ರೇಖಾಚಿತ್ರ ಸಂಖ್ಯೆ 1: ಸಾವಲಉಗಳಲ್ಲಿ ಒಟ್ಟಾರೆ ಹೂಡಿಕೆಗಳು**

**(₹ ಕೋಟಿಯಲ್ಲಿ)**




**9.** 31 ಮಾರ್ಚ್ 2019ರಲ್ಲಿದ್ದಂತೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಹೂಡಿಕೆಗಳ ವಲಯವಾರು ಸಂಕ್ಷಿಪ್ತ ಚಿತ್ರಣವನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 3: ಸಾವಲಉಗಳಲ್ಲಿ ವಲಯವಾರು ಹೂಡಿಕೆ**

| ಕ್ರಮ ಸಂಖ್ಯೆ | ವಲಯದ ಹೆಸರು | ಸರ್ಕಾರಿ ಕಂಪನಿಗಳು | | ಶಾಸನಬದ್ಧ ನಿಗಮಗಳು | ಒಟ್ಟು | ಹೂಡಿಕೆ (₹ ಕೋಟಿಯಲ್ಲಿ) |
|---|---|---|---|---|---|---|
| | | ಕಾರ್ಯನಿರತ | ಕಾರ್ಯಸ್ಥಗಿತ | | | |
| 1 | ಕೃಷಿ ಮತ್ತು ಸಂಬಂಧಿತ | 13 | 5 | 1 | 19 | 919.78 |
| 2 | ಹಣಕಾಸು | 19 | - | 1 | 20 | 4,397.55 |
| 3 | ಮೂಲಭೂತ ಸೌಕರ್ಯಗಳು | 23 | 1 | - | 24 | 68,609.81 |
| 4 | ಉತ್ಪಾದನೆ | 19 | 7 | - | 26 | 1,089.38 |
| 5 | ವಿದ್ಯುತ್ | 11 | - | - | 11 | 55,573.93 |
| 6 | ಸೇವೆಗಳು | 5 | - | 4 | 9 | 2,251.20 |
| 7 | ಇತರೆ | 5 | - | - | 5 | 0.12 |
| | **ಒಟ್ಟು** | **95** | **13** | **6** | **114** | **1,32,841.77** |

31 ಮಾರ್ಚ್ 2015 ಹಾಗೂ 31 ಮಾರ್ಚ್ 2019ರ ಅಂತ್ಯಕ್ಕೆ ನಾಲ್ಕು ಗಮನಾರ್ಹ ವಲಯಗಳಲ್ಲಿನ ಹೂಡಿಕೆಗಳನ್ನು ರೇಖಾಚಿತ್ರದಲ್ಲಿ ಸೂಚಿಸಲಾಗಿದೆ.

**ರೇಖಾಚಿತ್ರ ಸಂಖ್ಯೆ 2: ಸಾವಉಗಳಲ್ಲಿ ವಲಯವಾರು ಹೂಡಿಕೆಗಳು**

**(₹ ಕೋಟಿಯಲ್ಲಿ)**




ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮೂಲಭೂತಸೌಕರ್ಯಗಳು ಹಾಗೂ ವಿದ್ಯುತ್ ವಲಯಗಳಿಗೆ 2018–19ರಲ್ಲಿ ಅನುಕ್ರಮವಾಗಿ ಶೇಕಡಾ 51.65 ಹಾಗೂ ಶೇಕಡಾ 41.83ರಷ್ಟು ಒತ್ತನ್ನು ನೀಡಲಾಗಿತ್ತು. 2014–15 ಮತ್ತು 2018–19ರ ನಡುವೆ ಮೂಲಭೂತಸೌಕರ್ಯ ಹಾಗೂ ವಿದ್ಯುತ್ ವಲಯಗಳಲ್ಲಿ ಹೂಡಿಕೆಯು ಅನುಕ್ರಮವಾಗಿ ₹ 26,902.59 ಕೋಟಿ ಹಾಗೂ ₹ 22,188.30 ಕೋಟಿಯಷ್ಟು ಹೆಚ್ಚಳಗೊಂಡಿತ್ತು.

## ಈ ವರದಿಯ ವ್ಯಾಪ್ತಿ

**10.** ಈ ವರದಿಯು ವಿದ್ಯುತ್ ವಲಯದ ಸಾವಉಗಳ ಮತ್ತು ಸಾವಉಗಳ (ವಿದ್ಯುತ್ ವಲಯದ ಹೊರತಾದ) ಮೇಲಿನ ವೀಕ್ಷಣೆಗಳನ್ನು ಹೊಂದಿದೆ. ವಿದ್ಯುತ್ ವಲಯದ ಸಾವಉಗಳ ಮೇಲಿನ ವೀಕ್ಷಣೆಗಳನ್ನು ಅಧ್ಯಾಯ–I, II ಮತ್ತು IIIರಲ್ಲಿ ಸೇರಿಸಲಾಗಿದೆ. ಇವು ಒಂದು ಸಾಧನಾ ಲೆಕ್ಕಪರಿಶೋಧನೆ – ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ "ವಿದ್ಯುತ್ ಪ್ರಸರಣಕ್ಕಾಗಿ ಮೂಲಸೌಕರ್ಯದ (220 ಕೆವಿ/110 ಕೆವಿ ಸ್ಥಾವರಗಳು ಮತ್ತು ವಿದ್ಯುತ್ ಸರಬರಾಜು ಮಾರ್ಗಗಳು) ಸೃಷ್ಟಿ" (ಅಧ್ಯಾಯ–II) ಮತ್ತು ಎರಡು ಅನುಪಾಲನಾ ಲೆಕ್ಕಪರಿಶೋಧನೆಯ ಕಂಡಿಕೆಗಳನ್ನು (ಅಧ್ಯಾಯ–III) ಒಳಗೊಂಡಿದೆ. ಸಾವಉಗಳ (ವಿದ್ಯುತ್ ವಲಯದ ಹೊರತಾದ) ಮೇಲಿನ ವೀಕ್ಷಣೆಗಳನ್ನು ಅಧ್ಯಾಯ IV, V ಮತ್ತು VI ರಲ್ಲಿ ಸೇರಿಸಲಾಗಿದೆ. ಇವು ಒಂದು ಸಾಧನಾ ಲೆಕ್ಕಪರಿಶೋಧನೆ 'ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ' (ಅಧ್ಯಾಯ V) ಮತ್ತು ಮೂರು ಅನುಪಾಲನಾ ಲೆಕ್ಕಪರಿಶೋಧನೆಯ ಕಂಡಿಕೆಗಳನ್ನು (ಅಧ್ಯಾಯ VI) ಹೊಂದಿವೆ.

ವಿದ್ಯುತ್ ವಲಯದ ಸಾವಉಗಳಿಗೆ ಮತ್ತು ಸಾವಉ (ವಿದ್ಯುತ್ ವಲಯದ ಹೊರತಾದ)ಗಳಿಗೆ ಸಂಬಂಧಿಸಿದ ವೀಕ್ಷಣೆಗಳ ಹಣಕಾಸಿನ ಪರಿಣಾಮ ಕ್ರಮವಾಗಿ ₹ 1,605.55 ಕೋಟಿ ಮತ್ತು ₹ 277.19 ಕೋಟಿಯಷ್ಟಿತ್ತು.